ಕರ್ನಾಟಕ ಸರ್ಕಾರ

ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 338

ಸದಸ್ಯರ ಹೆಸರು : ಶ್ರೀ ಎನ್ ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 14-09-2021.

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳು ಎಂದು ಗುರುತಿಸಲ್ಪಟ್ಟಿರುವ ಉದ್ದಿಮೆಗಳಾವುವು; ಈ ಉದ್ದಿಮೆಗಳನ್ನು ಗುರುತಿಸಲು ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು)	ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 60 ಸಾರ್ವಜನಿಕ ಉದ್ದಿಮೆಗಳಿವೆ. (ಪ್ರತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ) ಈ ಉದ್ದಿಮೆಗಳನ್ನು ಗುರುತಿಸಲು ಅನುಸರಿಸುವ ಮಾನದಂಡಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಆ	ಮಂಡ್ಯ ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ಸಾರ್ವಜನಿಕ ಉದ್ದಿಮೆಗಳು ಎಂದು ಗುರುತಿಸಿರುವ ಉದ್ದಿಮೆಗಳಾವುವು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು);	ಮೈಸೂರು ಸಕ್ಕರೆ ಕಾರ್ಖಾನೆ ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು.
ಇ	ಮಂಡ್ಯ ಜಿಲ್ಲೆಯ ಯಾವ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿ ನಡೆಯುತ್ತಿವೆ; (ತಾಲ್ಲೂಕುವಾರು ವಿವರ ನೀಡುವುದು);	ಮೈಸೂರು ಸಕ್ಕರೆ ಕಾರ್ಖಾನೆ
ಈ	ಹಾಗಿದ್ದಲ್ಲಿ, ಈ ಉದ್ದಿಮೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ನಿಲುವೇನು; ಅಭಿವೃದ್ಧಿಪಡಿಸಲು ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ? (ವಿವರ ನೀಡುವುದು).	ಮೈಸೂರು ಸಕ್ಕರೆ ಕಂಪನಿ ನಿಯಮಿತ ಕಾರ್ಖಾನೆಯನ್ನು 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT (Lease Rehabilitate Operate Transfer) ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಕೆಲವು ಷರತ್ತಿನೊಂದಿಗೆ ಅನುಮತಿ ನೀಡಲು ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ-542/2020 ದಿನಾಂಕ:12.11.2020 ರಂದು ತೀರ್ಮಾನ ಕೈಗೊಳ್ಳಲಾಗಿದೆ.

ಸಾಉಉಇ 13 ಎಲ್ ಸಿ ಯು 2021

(ಎನ್. ನಾಗರಾಜು)(ಎಂಟಿಬಿ)

ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ

ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ-1

ಕ್ರ.ಸಂ	ಸಾರ್ವಜನಿಕ ಉದ್ದಿಮೆಗಳ ಹೆಸರು
1.	ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
2.	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
3.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ
4.	ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
5.	ಮೈಸೂರು ಪೆಯಿಂಟ್ಸ್ & ವಾರ್ನಿಷ್ ಲಿಮಿಟೆಡ್
6.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
7.	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
8.	ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
9.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
10.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
11.	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
12.	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
13.	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
14.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
15.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
16.	ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
17.	ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
18.	ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
19.	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್
20.	ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ
21.	ಕಾವೇರಿ ನೀರಾವರಿ ನಿಗಮ ನಿಯಮಿತ
22.	ಕರ್ನಾಟಕ ನೀರಾವರಿ ನಿಗಮ ನಿಯಮಿತ
23.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
24.	ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
25.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
26.	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
27.	ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ
28.	ಕರ್ನಾಟಕ ಕಾಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ
29.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
30.	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ

...2/-

31.	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
32.	ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ
33.	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
34.	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ
35.	ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ
36.	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
37.	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
38.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ನಿಗಮ ನಿಯಮಿತ
39.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
40.	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
41.	ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
42.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ
43.	ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ
44.	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
45.	ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
46.	ಮೈಸೂರು ಕಾಗದ ಕಾರ್ಖಾನೆ ನಿಯಮಿತ
47.	ಮೈಸೂರು ಸಕ್ಕರೆ ಕಂಪನಿ ನಿಯಮಿತ
48.	ಎನ್ ಜಿಇಎಫ್ (ಹುಬ್ಬಳ್ಳಿ) ನಿಯಮಿತ
49.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
50.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
51.	ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
52.	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
53.	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
54.	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
55.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ
56.	ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ(ಲಿಡ್ಕರ್)
57.	ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ
58.	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
59.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ
60.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಅನುಬಂಧ-2

ಸಾರ್ವಜನಿಕ ಉದ್ದಿಮೆಗಳನ್ನು ಗುರುತಿಸಲು ಅನುಸರಿಸಿರುವ ಮಾನದಂಡಗಳು ಈ ಕೆಳಕಂಡಂತಿದೆ.

1. ಕಂಪನಿ ಕಾಯ್ದೆ 1956/2013 ರಡಿಯಲ್ಲಿ ನೊಂದಾಯಿತವಾಗಿರಬೇಕು.
2. ಕರ್ನಾಟಕ ಸರ್ಕಾರದ ಪೂರ್ಣ ಸ್ವಾಮ್ಯದಲ್ಲಿ ಅಥವಾ ಅಂಶಿಕವಾಗಿ ಆರ್ಥಿಕ ನೆರವಿನಿಂದ ಸಾರ್ವಜನಿಕ ಉದ್ದಿಮೆ ಇಲಾಖೆಗಳು ಸ್ಥಾಪನೆಯಾಗಿರುತ್ತವೆ.
3. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮವು ಹೊಸ ಅಥನಾ ಈಗ ಅಸ್ತಿತ್ವದಲ್ಲಿರುವ ನಿಗಮ ಅಥವಾ ಕಂಪನಿಗಳಲ್ಲಿ 50 ಲಕ್ಷಕ್ಕೂ ಮೀರಿ ಬಂಡವಾಳ ಹೂಡುವ ಪ್ರಸಂಗಗಳಲ್ಲಿ ಸರ್ಕಾರವು ಸಹಮತಿ ನೀಡುತ್ತದೆ.
4. ಸಾರ್ವಜನಿಕ ಉದ್ದಿಮೆಗಳ ಮುಚ್ಚುವಿಕೆ, ವಿಲೀನಗೊಳಿಸುವಿಕೆ ಅಥವಾ ವಿನ್ಯಾಸದಲ್ಲಿನ ಪುನರ್ ಸಂಘಟನೆಯಂಥ ಇತರ ಪ್ರಮುಖ ಯೋಜನೆಗಳ ಕುರಿತು ಸರ್ಕಾರವು ನಿರ್ಧರಿಸುತ್ತದೆ.
5. ರಾಜ್ಯ ಸ್ವಾಮ್ಯದ ಸಾರ್ವಜನಿಕ ನಿಗಮ, ಕಂಪನಿಗಳು, ಉದ್ದಿಮೆಗಳ ಮತ್ತು ಯೋಜನೆಗಳಲ್ಲಿ ಬಂಡವಾಳ ವೆಚ್ಚ ಅಂದಾಜುಗಳ ಶೇಕಡ 20ಕ್ಕೂ ಹೆಚ್ಚು ಅಥವಾ ರೂ.25. ಲಕ್ಷಕ್ಕೂ ಕಡಿಮೆ (ಇದರಲ್ಲಿ ಯಾವುದು ಕಡಿಮೆಯೋ ಅದು) ಇದ್ದರೆ ಅಂಥ ಕಡೆ ಬಂಡವಾಳ ವೆಚ್ಚ ಅಂದಾಜುಗಳನ್ನು ಹೆಚ್ಚಿಸುವ ಕುರಿತು ಸರ್ಕಾರವು ನಿರ್ಧರಿಸುತ್ತದೆ.
6. ಸಾರ್ವಜನಿಕ ಉದ್ದಿಮೆಗಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಅವರಿಂದ ನಾಮ ನಿರ್ದೇಶಿಸಲ್ಪಟ್ಟಿದ್ದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅಧಿಕಾರಿಯು ಪ್ರತಿ ಸಾರ್ವಜನಿಕ ಉದ್ದಿಮೆಯ ನಿರ್ದೇಶಕರ ಮಂಡಳಿಗೆ ನಿರ್ದೇಶಕರಾಗಿ ನೇಮಿಸಲ್ಪಡುತ್ತಾರೆ.
7. ಸರ್ಕಾರದ ಅನುಮೋದನೆ ಪಡೆದು ಉದ್ದಿಮೆಗಳಲ್ಲಿ ಖಾಸಗೀಕರಣ, ಪುನರ್ ರಚನೆ ಮತ್ತು ಬಂಡವಾಳ ಹಿಂತೆಗೆದುಕೊಳ್ಳುವ ಕುರಿತಂತೆ ಸಾಮಾನ್ಯ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ಸರ್ಕಾರ ರೂಪಿಸುತ್ತದೆ.
8. ಸರ್ಕಾರದ ಅನುಮೋದನೆ ಪಡೆದು ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಹಣಕಾಸು ನಿರ್ವಹಣೆ ವೇತನ ಒಪ್ಪಂದ ಮಾನವ ಸಂಪನ್ಮೂಲ ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ನೀತಿಯ ಮಾರ್ಗದರ್ಶಿ ಸೂತ್ರಗಳನ್ನು ಸರ್ಕಾರ ರೂಪಿಸುತ್ತದೆ.
9. ಸಾರ್ವಜನಿಕ ಉದ್ದಿಮೆಗಳು ಈ ಕೆಳಗಿನ ವಿಷಯಗಳಲ್ಲಿ ಸರ್ಕಾರದ ಅನುಮೋದನೆಯನ್ನು ಪಡಯಬೇಕಿರುತ್ತದೆ.
   - ಬಂಡವಾಳ ವೆಚ್ಚ ರೂ.1.00 ಕೋಟಿಗಿಂತ ಜಾಸ್ತಿಯಿರುವ ಎಲ್ಲಾ ಕಾರ್ಯಕ್ರಮಗಳು.
   - ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಖಾಲಿಯಿರುವ ಹುದ್ದೆಗಳಿಗೆ ಮಾಡಿಕೊಳ್ಳುವ ನೇಮಕಾತಿಗಳು
   - ಸಂಸ್ಥೆಯ ಒಡೆತನವಲ್ಲಿರುವ ಆಸ್ತಿಯ ಮಾರಾಟ, ಗುತ್ತಿಗೆ ಹಾಗೂ ವಿಲೇವಾರಿಗೆ ಸಂಬಂಧಿಸಿದ ವಿಷಯಗಳು.
   - ಅಧೀನ ಸಂಸ್ಥೆಗಳ ರಚನೆ ಮತ್ತು ನಿಗಮಗಳ ಸಮಾಪನೆ ವಿಷಯಗಳು.
   - ಆರ್ಥಿಕ ಸಲಹೆಗಾರ ನೇಮಕಾತಿ.
   - ಸಂಸ್ಥೆಗಳ ಉದ್ಯೋಗಿಗಳ ವೇತನ ಪರಿಷ್ಕರಣೆಯ ಸಂದರ್ಭದಲ್ಲಿ ವೇತನ ಹೆಚ್ಚಳ ಶೇ.10 ಕ್ಕಿಂತ ಜಾಸ್ತಿಯಿದ್ದಾಗ.
   - ಸಂಸ್ಥೆಯ ಉದ್ಯೋಗಿಗಳಿಗೆ ಬೋನಸ್/EX gratia ಪಾವತಿಗೆ ಸಂಬಂಧಿಸಿದ ವಿಷಯಗಳು.